# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1250 |
| ಸದಸ್ಯರ ಹೆಸರು | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 22-08-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯಕ್ಕೆ ಪ್ರತಿ ವರ್ಷ ಅಗತ್ಯವಿರುವ ಯೂರಿಯಾದ (ರಸಗೊಬ್ಬರ) ಪ್ರಮಾಣವೆಷ್ಟು; ಈ ಗೊಬ್ಬರವನ್ನು ಯಾವ ಮೂಲಗಳಿಂದ ಶೇಖರಿಸಲಾಗುತ್ತಿದೆ; ಕೊರತೆಯಾಗುವ ಯೂರಿಯಾದ (ರಸಗೊಬ್ಬರ) ಪ್ರಮಾಣವೆಷ್ಟು; (ಕಳೆದ 3 ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯಕ್ಕೆ ಪ್ರತಿ ವರ್ಷ (ಮುಂಗಾರು/ ಹಿಂಗಾರು ಬೇಸಿಗೆ ಹಂಗಾಮು ಸೇರಿದಂತೆ) ಅಗತ್ಯವಿರುವ ಯೂರಿಯಾದ ಸರಾಸರಿ ಪ್ರಮಾಣ 17.34ಲಕ್ಷ ಮೆ.ಟನ್.<br><br>ಕೇಂದ್ರ ಸರ್ಕಾರದಿಂದ ಪ್ರತಿ ಮಾಹೆ ರಸಗೊಬ್ಬರ ತಯಾರಿಕಾ ಸಂಸ್ಥೆವಾರು ದೇಶೀಯ ಉತ್ಪಾದನೆ(Indigenous)/ ಆಮದು(import) ಯೂರಿಯಾವನ್ನು ಹಂಚಿಕೆ ಮಾಡಿ ರಾಜ್ಯಕ್ಕೆ ನೀಡಲಾಗುತ್ತದೆ. ತದನಂತರ ರಸಗೊಬ್ಬರ ತಯಾರಿಕಾ ಸಂಸ್ಥೆಯವರಿಂದ ನೇರವಾಗಿ ಪರವಾನಗಿ ಹೊಂದಿರುವ ಖಾಸಗಿ ಮಾರಾಟಗಾರರು ಮತ್ತು ಸಹಕಾರ ಸಂಘಗಳ ಮುಖಾಂತರ ರೈತರಿಗೆ ಮಾರಾಟ ಮಾಡಲಾಗುತ್ತಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಯೂರಿಯಾ ರಸಗೊಬ್ಬರದ ಯಾವುದೇ ಕೊರತೆಯಾಗಿರುವುದಿಲ್ಲ.<br><br>ಕಳೆದ ಮೂರು ವರ್ಷಗಳಲ್ಲಿ ಯೂರಿಯಾ ರಸಗೊಬ್ಬರದ ಅಗತ್ಯತೆಯ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| (ಆ) | 2025-26ನೇ ಸಾಲಿಗೆ ರಾಜ್ಯ ಸರ್ಕಾರವು ಯೂರಿಯಾಕ್ಕಾಗಿ ಕೇಂದ್ರಕ್ಕೆ ಸಲ್ಲಿಸಿದ (ರಸಗೊಬ್ಬರ) ಬೇಡಿಕೆ ಪ್ರಮಾಣವೆಷ್ಟು; ಕೇಂದ್ರ ಸರ್ಕಾರವು ರಾಜ್ಯಕ್ಕೆ ಸರಬರಾಜು ಮಾಡಿರುವ ಯೂರಿಯಾದ (ರಸಗೊಬ್ಬರದ) ಪ್ರಮಾಣವೆಷ್ಟು; ಯಾವ ಮಾನದಂಡಗಳಡಿ ರಾಜ್ಯಗಳಿಗೆ ಯೂರಿಯಾವನ್ನು (ರಸಗೊಬ್ಬರ) ಸರಬರಾಜು ಮಾಡುತ್ತದೆ ಮತ್ತು ಇದಕ್ಕೆ ವಿಧಿಸುತ್ತಿರುವ ಧನವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | 2025-26ನೇ ಸಾಲಿನ ಮುಂಗಾರು ಹಂಗಾಮಿಗೆ 12.95 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಬೇಡಿಕೆಯನ್ನು ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದಿಂದ 11.17 ಲಕ್ಷ ಮೆ.ಟನ್ (ಏಪ್ರಿಲ್-2025 ರಿಂದ ಸೆಪ್ಟೆಂಬರ್-2025ರವರೆಗೆ) ಯೂರಿಯಾ ರಸಗೊಬ್ಬರವನ್ನು ಹಂಚಿಕೆ ಮಾಡಲಾಗಿರುತ್ತದೆ.<br><br>ಏಪ್ರಿಲ್ ಮಾಹೆಯಿಂದ ದಿನಾಂಕ 18.08.2025ರವರೆಗೆ ರಾಜ್ಯಕ್ಕೆ ಒಟ್ಟು 6.54 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರವು ಸರಬರಾಜಾಗಿರುತ್ತದೆ (ಆರಂಭಿಕ ಶಿಲ್ಕು 3.46 ಲಕ್ಷ ಮೆ.ಟನ್ ಹೊರತುಪಡಿಸಿ). |

| | | |
|---|---|---|
| | | ಹಂಗಾಮಿನ ಪೂರ್ವದಲ್ಲಿಯೇ ಜಿಲ್ಲೆಗಳಲ್ಲಿ ಆವರಿಸಬಹುದಾದ ಬೆಳೆಗಳ ವಿಸ್ತೀರ್ಣದ ಆಧಾರದ ಮೇಲೆ ರಸಗೊಬ್ಬರದ ಬೇಡಿಕೆಯನ್ನು ಅಂದಾಜಿಸಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗುತ್ತದೆ. ಕೇಂದ್ರ ಸರ್ಕಾರದಿಂದ ಮಾಹೆವಾರು ಹಂಚಿಕೆ ಮಾಡಲಾಗುವ ವಿವಿಧ ರಸಗೊಬ್ಬರಗಳನ್ನು ಜಿಲ್ಲಾವಾರು ಬೇಡಿಕೆಗನುಗುಣವಾಗಿ ನಿಗಧಿಪಡಿಸಿ, ರಸಗೊಬ್ಬರ ತಯಾರಿಕಾ ಸಂಸ್ಥೆಯವರಿಂದ ನೇರವಾಗಿ ಪರವಾನಗಿ ಹೊಂದಿರುವ ಖಾಸಗಿ ಮಾರಾಟಗಾರರು ಹಾಗೂ ಸಹಕಾರ ಸಂಘಗಳ ಮೂಲಕ ರೈತರಿಗೆ ಮಾರಾಟ ಮಾಡಲಾಗುತ್ತಿದೆ.<br><br>ಕೇಂದ್ರ ಸರ್ಕಾರವು ಪ್ರತಿ 45 ಕೆ.ಜಿ ಚೀಲ ಯೂರಿಯಾ ರಸಗೊಬ್ಬರಕ್ಕೆ ರೂ. 266.5 ಗಳ ಗರಿಷ್ಠ ಮಾರಾಟ ದರವನ್ನು ನಿಗಧಿಪಡಿಸಿರುತ್ತದೆ. |
| (ಇ) | ಕರ್ನಾಟಕ ಸರ್ಕಾರದ ಬೇಡಿಕೆಗನುಗುಣವಾಗಿ ಕೇಂದ್ರ ಸರ್ಕಾರವು ಯೂರಿಯಾವನ್ನು ರಸಗೊಬ್ಬರ ಸರಬರಾಜು ಮಾಡುತ್ತಿದೆಯೇ? (ಕಳೆದ 3 ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು) | ಕಳೆದ ಮೂರು ಸಾಲಿನಲ್ಲಿ ಸರ್ಕಾರದ ಬೇಡಿಕೆಗನುಗುಣವಾಗಿ ಕೇಂದ್ರ ಸರ್ಕಾರವು ಯೂರಿಯಾ ರಸಗೊಬ್ಬರವನ್ನು ಸರಬರಾಜು ಮಾಡಿದ್ದು, ಯಾವುದೇ ಕೊರತೆ ಉಂಟಾಗಿರುವುದಿಲ್ಲ.<br><br>ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದ ಬೇಡಿಕೆಗನುಗುಣವಾಗಿ ಯೂರಿಯಾ ರಸಗೊಬ್ಬರವು ಸರಬರಾಜಾಗದ ಕಾರಣ ಕೆಲವು ಜಿಲ್ಲೆಗಳಲ್ಲಿ ಕೊರತೆಯಾಗಿರುತ್ತದೆ.<br><br>ಕಳೆದ ಮೂರು ವರ್ಷಗಳ ಯೂರಿಯಾ ರಸಗೊಬ್ಬರ ಸರಬರಾಜು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ. AGRI/275/ACT/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

ಅನುಬಂಧ- ಎಲ್.ಸಿ.ಕ್ಯೂ-1250

ಕಳೆದ ಮೂರು ಸಾಲಿನ ಯೂರಿಯಾ ರಸಗೊಬ್ಬರ ಬೇಡಿಕೆ/ಹಂಚಿಕೆ/ಸರಬರಾಜು ವಿವರ (ಲಕ್ಷ ಮೆ.ಟನ್ ಗಳಲ್ಲಿ)

| ವರ್ಷ | ಕೇಂದ್ರಕ್ಕೆ ಸಲ್ಲಿಸಲಾದ ಬೇಡಿಕೆ | | | ಕೇಂದ್ರ ಸರ್ಕಾರದ ಹಂಚಿಕೆ | | | ಸರಬರಾಜು | | |
|---|---|---|---|---|---|---|---|---|---|
| | ಮುಂಗಾರು | ಹಿಂಗಾರು-ಬೇಸಿಗೆ | ಒಟ್ಟು | ಮುಂಗಾರು | ಹಿಂಗಾರು-ಬೇಸಿಗೆ | ಒಟ್ಟು | ಮುಂಗಾರು (ಆರಂಭಿಕ ಶಿಲ್ಕು ಒಳಗೊಂಡಂತೆ) | ಹಿಂಗಾರು-ಬೇಸಿಗೆ | ಒಟ್ಟು |
| **2022-23** | 10.50 | 7.76 | **18.26** | 10.50 | 6.70 | **17.20** | 13.08 | 9.05 | **22.13** |
| **2023-24** | 11.75 | 7.66 | **19.41** | 9.10 | 7.00 | **16.10** | 13.33 | 7.72 | **21.05** |
| **2024-25** | 11.54 | 7.23 | **18.77** | 10.75 | 6.50 | **17.25** | 15.13 | 7.50 | **22.63** |